

ಬಾಗಿಲ ಬಳಿ ನಿಂತ ಅಮ್ಮ ಗಾಬರಿಯಿಂದ ತಿರುಗಿ ನೋಡಿದರು.

‘ನಾನು ಹೇಳಿದ್ದು ಹಾಗಲ್ಲಮ್ಮ. ನನ್ನನ್ನೂ ಒಂದು ಮಾತು ಕೇಳಬಹುದಾಗಿತ್ತು ಅಂತ. ನೀವು ಹಿರಿಯರು ಮಾತುಕತೆ ಮುಂದುವರೆಸಿ. ನನ್ನ ಗೆಳೆಯನ ತಂಗಿ ಮದುವೆಗಂತ ಇವತ್ತು ರಾತ್ರಿ ಕುಮಟಾಕ್ಕೆ ಹೋಗ್ತಿದ್ದೀನಿ. ಅಲ್ಲಿಂದ ಬಂದಮೇಲೆ ಇದರ ಬಗ್ಗೆ ಮಾತನಾಡೋಣ, ಆಯ್ತ?’ ಅಮ್ಮನ ಬಳಿ ಸಾಗಿ ಅವರ ಭುಜವನ್ನು ಅದುಮಿದೆ. ನನ್ನ ಮಾತು ಕೇಳಿ ಅವರಿಗೆ ಸಮಾಧಾನ ಸಿಟ್ಟು ಎರಡೂ ಒಟ್ಟಿಗೆ ಬಂದಿತ್ತು. ‘ಈಗ ಹೇಳ್ತಿದ್ದೀಯಲ್ಲ. ಎಷ್ಟು ಗಂಟೆಗೆ ಬಸ್ ಇದೆ?’ – ಆಕ್ಷೇಪದ ದನಿ ಅವರದಾಗಿತ್ತು. ‘ಹನ್ನೊಂದು ಗಂಟೆಗೆ’ – ಬೇಸರದ ದನಿ ನನ್ನದಾಗಿತ್ತು. ಕಾರನ್ನು ತೆಗೆದುಕೊಂಡು ಹೋಗು ಅಂತಾರೇನೋ ಎನ್ನುವ ನನ್ನ ಆಸೆಗೆ ನಿರಾಸೆ ಮೆತ್ತಿತ್ತು. ಪಾಲಕರ ಸ್ವಭಾವದ ಅರಿವಿದ್ದರಿಂದ ಮೊದಲೇ ಟಿಕೆಟ್ ಮಾಡಿಸಿಟ್ಟಿದ್ದೆ.

***

ಬಸ್ ಹೆಚ್ಚೂಕಡಿಮೆ ತುಂಬಿತ್ತು. ಸೀಟನ್ನು ಕಾಯ್ದಿರಿಸಿಕೊಂಡಿದ್ದರಿಂದ ಹೊಲದಲ್ಲಿ ನಿಲ್ಲಿಸಿಟ್ಟ ಬೆದುರು ಬೊಂಬೆಯಂತೆ ರಾತ್ರಿಯಿಡೀ ನಿಂತು ಪ್ರಯಾಣಿಸುವ ಕರ್ಮ ಇರಲಿಲ್ಲ. ನಿಧಾನವಾಗಿ ನನ್ನ ಸೀಟ್ ಹುಡುಕುತ್ತ ನಡೆದೆ. ‘ಛೇ, ಎಂಟು ಏಳಾಗಿದ್ದರೆ ಕಿಟಕಿಯ ಪಕ್ಕದ ಸೀಟ್ ಸಿಗುತ್ತಿತ್ತು’ ಎಂದು ಮನದಲ್ಲೇ ಅಂದುಕೊಳ್ಳುತ್ತ ಬ್ಯಾಗನ್ನು ಸೀಟಿನ ಕೆಳಗೆ ತಳ್ಳಿ ಆಸನಕ್ಕೊರಗಿದವನನ್ನು ನಿದ್ರಾದೇವಿ ಹರಸಿದ್ದಳು.

‘ಎಕ್ಸ್‌ಕ್ಯೂಸ್ ಮಿ. ನೀವು ನನ್ನ ಸೀಟಿನಲ್ಲಿ ಕುಳಿತುಕೊಂಡಿದ್ದೀರಿ’. ಹೆಣ್ಣಿನ ಧ್ವನಿಯೊಂದು ಎಚ್ಚರಿಸಿತು. ‘ಕ್ಷಮಿಸಿ, ಗೊತ್ತಾಗಲಿಲ್ಲ’ ಎನ್ನುತ್ತ ನಿದ್ದೆಗಣ್ಣಿನಲ್ಲೆ ಏಳಲು ಹೊರಟೆ. ಅಷ್ಟರಲ್ಲಿ ನನ್ನ ಪಕ್ಕದಲ್ಲಿ ಕುಳಿತಿದ್ದ ವ್ಯಕ್ತಿ ಎದ್ದುಹೋಗಿದ್ದ. ಆ ಹೆಣ್ಣು ನನ್ನನ್ನು ನೋಡಿ ಮುಗುಳ್ನಗು ಸೂಸುತ್ತ ನನ್ನ ಪಕ್ಕದ ಸೀಟಿನಲ್ಲಿ ಆಸೀನಳಾದಳು. ಪೆಚ್ಚುಪೆಚ್ಚಾಗಿ ನಾನೂ ನಕ್ಕೆ. ಅವಳ ಎದುರಿಗೆ ಪೆದ್ದನಂತೆ ವರ್ತಿಸಿದ್ದು ಅದ್ಯಾಕೋ ಗೊತ್ತಿಲ್ಲ. ಒಂಥರಾ ಕಸಿವಿಸಿಯಾಗಿತ್ತು.